


ಕಡೆಯ ಹುಡುಗನೆನ್ನಿಸಲಿಲ್ಲ ಮೀರಾಗೆ. ಅರೆಬರೆ ಕನ್ನಡ ನಡುನಡುವೆ ಹಿಂದಿಯಲ್ಲಿ ಮಾತನಾಡುತ್ತಿದ್ದ. ಆಕಸ್ಮಿಕದಂತೆ ಒಳಬಂದ ಮೀರಾಳ ನೋಡಿ ಥಟ್ಟನೇ ಆ ಹುಡುಗ ಎದ್ದು ನಿಂತ. ಮೀರಾನ ಆ ಹೊತ್ತಿನಲ್ಲಿ ನೋಡಿ ಬೇಬಿ ಕೂಡಾ ಗಲಿಬಿಲಿಗೊಂಡಂತೆ ಕಂಡಳು. 'ಬೇಬಿ, ಮಗಾ, ಅವ್ವಿ ಇಲ್ಲೆನೆ? ಬೆಳ್ಳುಳ್ಳಿ ಎಸಳೆರಡು ಇದ್ರೀ ಕುಡು ಮಗಾ' ಎಂದಳು ಮೀರಾ. ಬೇಬಿ ಮುಖ ಬಿಳಿಚಿಕೊಂಡಂತೆ ಕಂಡಿತು. ಮುಜುಗರಕ್ಕೊಳಗಾದವಳಂತೆ ಕಂಡಳು. 'ಅವ್ವಿ ಕುಮಟೆಗೆ ಹೋಗಿದು ಮೀರಕ್ಕ! ಸಂಜೆಗೆ ಬರೂದು' ಎಂದಳು. ಒಳಗೆ ಹೋಗಿ ಇಡಿ ಇಡೀ ಎರಡು ಬೆಳ್ಳುಳ್ಳಿ ತಂದುಕೊಟ್ಟಳು. ಆ ಹುಡುಗ ಆಗಲೇ ಹೊರಟು ನಿಂತಿದ್ದ. ಮೀರಾ ಬೇರೇನೂ ವಿಚಾರಿಸಲಿಲ್ಲ. 'ನಾಳಿಗೀ ಬತ್ತಿ ಹೇಳು ಅವ್ವಿಗಿ' ಎಂದು ಹೇಳಿ ಹೊರಬಿದ್ದಳು. ಮಳೆ ಇನ್ನಷ್ಟು ಜೋರಾಗಿತ್ತು.

ಇತ್ತೀಚೆಗೆ ಎನ್.ಎಚ್.63 ಹೆದ್ದಾರಿ ನಿರ್ಮಾಣಕ್ಕೆ ಉತ್ತರ ಭಾರತದ ಭಾರಿ ಪ್ರಸಿದ್ಧ ಕಂಪನಿಯೊಂದು ಅಂಕೋಲೆಯ ಸುತ್ತಮುತ್ತ ಟೆಂಟ್ ಹಾಕಿತ್ತು. ಕಂಚಿನಬೈಲು, ಬೊಗ್ರಿಬೈಲು ಮುಂತಾದ ಕಡೆಗಳಲ್ಲಿ ದೊಡ್ಡ ದೊಡ್ಡ ಮಷೀನುಗಳು, ಕ್ರಷರ್ ಮಷೀನುಗಳು ಬೀಡುಬಿಟ್ಟಿದ್ದವು. ರಸ್ತೆ ನಿರ್ಮಾಣ ಕೆಲಸಗಳು ಭರದಿಂದಲೇ ನಡೆದಿದ್ದವು. ರಸ್ತೆ ಬದಿಯ ನೂರಾರು ವರ್ಷ ಬಾಳಿದ ಮರಗಳು ಉರುಳುರುಳಿ ಬಿದ್ದವು. ಎತ್ತರದ ಗುಡ್ಡಗಳು ನಿನ್ನೆ ನೋಡಿದವು ಇಂದಿರುತ್ತಿರಲಿಲ್ಲ. ಮೇನ್‌ರೋಡಿಗೆ ಕೆಲಸ ನಡೆದರೆ ಒಳ ಊರುಗಳಾದ ಕಂಚಿನಬೈಲು, ಬೋಗ್ರಿಬೈಲುಗಳಲ್ಲಿ ಕ್ರಷರ್ ಮಷೀನು, ಕ್ರೇನು, ಜೆಸಿಬಿಗಳ ಸದ್ದನ್ನು ಹಾಗೇ ಸವಿಯಬೇಕಿತ್ತು. ಚೀರೆಕಲ್ಲು